# ‘ನಮ್ಮ ಬಿಎಂಟಿಸಿ’ ನವನವೀನ

■ **ಶಶಿಕುಮಾರ್ ಸಿ.**

ಬೆಂಗಳೂರು ಮಹಾನಗರ ಸಾರಿಗೆ ನಿಗಮವು ‘ನಮ್ಮ ಬಿಎಂಟಿಸಿ’ ಮೊಬೈಲ್ ಆ್ಯಪ್ ಅಪ್‌ಗ್ರೇಡ್ ಮಾಡಿದ್ದು, ಹೊಸ ಆವೃತ್ತಿಯು ಬಸ್‌ಗಳಿಗೆ ಸಂಬಂಧಿಸಿದಂತೆ ಹೆಚ್ಚು ಮಾಹಿತಿಯೊಂದಿಗೆ ಪ್ರಯಾಣಿಕರಿಗೆ ಲಭ್ಯವಿದೆ.

ನಗರ ವ್ಯಾಪ್ತಿಯಲ್ಲಿ ಸಂಚರಿಸುತ್ತಿರುವ 5,200ಕ್ಕೂ ಹೆಚ್ಚು ಬಿಎಂಟಿಸಿ ಬಸ್ಸುಗಳ ಲೈವ್ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ಇದು ಒಳಗೊಂಡಿದ್ದು, ಈ ಪೈಕಿ ಬಿಎಸ್6 ಶ್ರೇಣಿಯ ಮತ್ತು ಎಲೆಕ್ಟ್ರಿಕ್ ಬಸ್ಸುಗಳ ಮಾಹಿತಿಯೂ ಸಿಗಲಿದೆ. ಆ್ಯಪ್‌ನ ಅಪ್‌ಗ್ರೇಡ್‌ನಿಂದಾಗಿ ಪ್ರಯಾಣಿಕರು ತಾವು ಸಂಚರಿಸುವ ಮಾರ್ಗದ ಬಸ್ಸುಗಳ ಲೈವ್ ಟ್ರ್ಯಾಕಿಂಗ್ ಜೊತೆಗೆ, ಬಸ್‌ಗಳ ನಿರೀಕ್ಷಿತ ಆಗಮನದ ಮಾಹಿತಿಯನ್ನೂ ಆಯಾ ಸಮಯಕ್ಕೆ ಅಪ್‌ಡೇಟ್ ಆಗಿ ಪಡೆಯಬಹುದಾಗಿದೆ.

ಬಿಎಂಟಿಸಿಯು ತನ್ನ ಎಲ್ಲ ಬಸ್‌ಗಳಲ್ಲಿ ಅಳವಡಿಸಿರುವ ಆಟೊಮ್ಯಾಟಿಕ್ ವೆಹಿಕಲ್ ಲೊಕೇಷನ್ ಸಿಸ್ಟಮ್ (ಎವಿಎಲ್‌ಎಸ್) ಡೇಟಾವನ್ನು ತಾತ್ಕಾಲಿಕ ಕ್ಲೌಡ್ ಸೆಟಪ್‌ನೊಂದಿಗೆ ಕರ್ನಾಟಕ ರಾಜ್ಯ ಡೇಟಾ ಸೆಂಟರ್‌ಗೆ ರವಾನಿಸುತ್ತದೆ. ಅಲ್ಲಿಂದ ಆ್ಯಪ್ ಮೂಲಕ ಪ್ರಯಾಣಿಕರಿಗೆ ಮೇಲ್ಕಂಡ ಮಾಹಿತಿಯು ಬೆರಳತುದಿಗೆ ತಲುಪುತ್ತದೆ. ಈ ಅಪ್‌ಗ್ರೇಡ್‌ನ ಕಾರಣಕ್ಕೆ ತಾತ್ಕಾಲಿಕವಾಗಿ ಆ್ಯಪ್ ಸ್ಥಗಿತಗೊಳಿಸಲಾಗಿತ್ತು.

ಆ್ಯಪ್‌ನಲ್ಲಿ ಲಭ್ಯವಿರುವ ನ್ಯಾವಿಗೇಷನ್ ಅನ್ನು ಇನ್ನಷ್ಟು ನಿಖರವಾಗಿ ತೋರುವಂತೆ ಮಾಡಲು ಆ್ಯಪ್‌ನ ಇಂಟರ್‌ಫೇಸ್ ಮರುವಿನ್ಯಾಸಗೊಳಿಸಲಾಗಿದೆ. ಲೈವ್ ಟ್ರ್ಯಾಕಿಂಗ್ ವ್ಯವಸ್ಥೆಯಿಂದಾಗಿ ಬಸ್‌ಗಳ ಆಗಮನದ ನಿಖರ ಮಾಹಿತಿ ಮುಂಚಿತವಾಗಿಯೇ ತಿಳಿದುಕೊಂಡು ಅದಕ್ಕೆ ತಕ್ಕಂತೆ ಸಮಯವನ್ನು ಹೊಂದಾಣಿಕೆ ಮಾಡಿಕೊಳ್ಳಬಹುದು.

ಹೊಸ ಆವೃತ್ತಿಯಲ್ಲಿ ರೂಟ್ ಪ್ಲಾನ್ ಮಾಡಿಕೊಳ್ಳುವುದು ಸುಲಭವಾಗಲಿದೆ. ಬಸ್ ಸಂಚರಿಸುವ ಮಾರ್ಗದ ಆರಂಭಿಕ ಸ್ಥಳ ಮತ್ತು ತಲುಪಬೇಕಾದ ಅಂತಿಮ ಸ್ಥಳದ ಬಗ್ಗೆ ತಿಳಿಯಲಿದೆ. ಟಿಕೆಟ್ ಮಾಹಿತಿಯೂ ಗೊತ್ತಾಗಲಿದ್ದು, ಪ್ರಯಾಣಿಕರು ತಾವು ತಲುಪಬೇಕಾದ ಸ್ಥಳ ಆಯ್ದುಕೊಂಡರೆ, ಅಲ್ಲಿಗೆ ತಲುಪಲು ಇರುವ ಮಾರ್ಗಗಳು ಮತ್ತು ಬಸ್‌ಗಳ ಬಗ್ಗೆ ಮಾಹಿತಿ ತೆರೆದುಕೊಳ್ಳುತ್ತದೆ. ಅದಕ್ಕೆ ತಕ್ಕಂತೆ ಮಾರ್ಗ ಮತ್ತು ಬಸ್ ಆಯ್ದುಕೊಂಡಾಗ ಟಿಕೆಟ್ ಶುಲ್ಕವೂ ಕಾಣಿಸಿಕೊಳ್ಳುತ್ತದೆ. ವಿದ್ಯಾರ್ಥಿಗಳು, ಹಿರಿಯ ನಾಗರಿಕರು ಮತ್ತು ವಿವಿಧ ವರ್ಗದ ಟಿಕೆಟ್ ಶುಲ್ಕವೂ ಇದರಲ್ಲೇ ಗೋಚರವಾಗಲಿದೆ.

ಮೆಟ್ರೊ ಕ್ಯೂಆರ್ ಕೋಡ್ ಟಿಕೆಟಿಂಗ್ ವ್ಯವಸ್ಥೆಯಂತೆ ‘ನಮ್ಮ ಬಿಎಂಟಿಸಿ’ಯಲ್ಲೂ ಜಾರಿಯಾದರೆ ಕ್ಯೂಆರ್ ಕೋಡ್ ಆಧರಿತ ಟಿಕೆಟ್, ನಿತ್ಯ, ವಾರ, ಮಾಸಿಕ ಆಧರಿತ ಪಾಸ್‌ಗಳನ್ನು ಪಡೆಯಬಹುದು. ಅದಕ್ಕಾಗಿ ಆ್ಯಪ್, ಥರ್ಡ್ ಪಾರ್ಟಿ ಆ್ಯಪ್ ಆದ ‘ಟ್ಯುಮೊಕ್’ಗೆ ನಿಮ್ಮನ್ನು ರಿಡೈರೆಕ್ಟ್ ಮಾಡುತ್ತದೆ. ಇದರಿಂದ ನಗದು ಹೊಂದಾಣಿಕೆ, ಚಿಲ್ಲರೆ ಸಮಸ್ಯೆ ತಪ್ಪಲಿದೆ.

ಇದರ ಜೊತೆಗೆ ನೀವು ಸಂಚರಿಸುವ ಬಸ್‌ಗಳ ಮಾರ್ಗ ಬದಲಾವಣೆ, ಪ್ರಯಾಣ ರದ್ದತಿ, ಆಗಮನ ತಡವಾಗುವ ಬಗ್ಗೆ ಹಾಗೂ ಇನ್ನಿತರ ಬದಲಾವಣೆಯ ಬಗ್ಗೆ ಆ್ಯಪ್ ಬಳಕೆದಾರರಿಗೆ ನೋಟಿಫಿಕೇಷನ್ ರವಾನಿಸುತ್ತದೆ. ಆ್ಯಪ್ ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಲಭ್ಯವಿದ್ದು, ಪ್ರಯಾಣಿಕರು ದೂರುಗಳು ಮತ್ತು ಪ್ರತಿಕ್ರಿಯೆಯನ್ನೂ ಆ್ಯಪ್ ಮೂಲಕವೇ ಬಿಎಂಟಿಸಿಗೆ ಸಲ್ಲಿಸಬಹುದು. ■

## ಆಲಿಬಾಬಾನ ಕ್ವೆನ್ ಎಐ

ಆಲಿಬಾಬಾ, ತಂತ್ರಜ್ಞಾನ ಮತ್ತು ಇ–ಕಾಮರ್ಸ್ ಕ್ಷೇತ್ರದಲ್ಲಿ ಜಾಗತಿಕವಾಗಿ ಪ್ರಮುಖ ಪಾತ್ರ ವಹಿಸುತ್ತಿರುವ ಚೀನೀ ಕಂಪನಿ, ಈಗ ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರಕ್ಕೂ ಕಾಲಿಟ್ಟಿದೆ. ಆಲಿಬಾಬಾ ಹೊರತಂದಿರುವ ಎಐ ಮಾಡೆಲ್‌ಗೆ ‘ಕ್ವೆನ್ ಎಐ’ (Qwen AI) ಎಂದು ಹೆಸರಿಸಿದ್ದಾರೆ.

ಆಲಿಬಾಬಾ ಎಐ ಹಲವಾರು ವಿಶೇಷ ಫೀಚರ್‌ಗಳನ್ನು ಹೊಂದಿದೆ. ಕೆಲವೇ ದಿನಗಳ ಹಿಂದೆ ಬಿಡುಗಡೆಗೊಂಡಿದ್ದ ಚೀನಾ ದೇಶದ್ದೇ ಆದ ಡೀಪ್‌ಸೀಕ್‌ಗೆ ಪ್ರಬಲ ಪೈಪೋಟಿ ಕೊಡುವಂತಿದೆ.

ಕಲಾ, ವ್ಯವಸಾಯ, ವಾಣಿಜ್ಯ ಮತ್ತು ಸೃಜನಶೀಲತೆ ವಲಯದಲ್ಲಿ ಹೊಸ ಸಾಧ್ಯತೆಗಳಿಗೆ ಇದು ವೇದಿಕೆಯಾಗಲಿದೆ ಅನ್ನೋದು ಟೆಕ್ ತಜ್ಞರ ಅಭಿಪ್ರಾಯ. ಆಲಿಬಾಬಾ ಎಐ ತಂತ್ರಜ್ಞಾನವು ಡೀಪ್ ಲರ್ನಿಂಗ್ ಮತ್ತು ನ್ಯೂರಲ್ ನೆಟ್‌ವರ್ಕ್‌ಗಳನ್ನು ಆಧರಿಸಿದೆ. ಇದು ದೊಡ್ಡ ಪ್ರಮಾಣದ ಡೇಟಾವನ್ನು ವಿಶ್ಲೇಷಿಸಿ, ಮಾನವನಂತೆ ಚಿಂತನೆ ಮತ್ತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಈ ಕಾರಣಕ್ಕೆ ಇದು ಸೃಜನಶೀಲ ಕಾರ್ಯಗಳಲ್ಲಿ ಅದ್ಭುತ ಪ್ರದರ್ಶನ ನೀಡುತ್ತದೆ.

ಆಲಿಬಾಬಾ ಎಐನ ನೈಸರ್ಗಿಕ ಭಾಷಾ ಸಂಸ್ಕರಣೆ ಸಾಮರ್ಥ್ಯವು ಹೆಚ್ಚು ದಕ್ಷತೆಯಿಂದ ಕೂಡಿದೆ. ಟೆಕ್ಸ್ಟ್‌ನ ಆಧಾರದ ಮೇಲೆ ಚರ್ಚೆಗಳು, ಲೇಖನಗಳು ಮತ್ತು ಕಥೆಗಳನ್ನು ರಚಿಸಬಲ್ಲದು. ಕಂಟೆಂಟ್ ರೈಟರ್‌ಗಳಿಗೆ ಇದು ನೆಚ್ಚಿನ ಸಹಾಯಕನಾಗಬಲ್ಲದು.

ಚಿತ್ರ, ವಿಡಿಯೊ ರಚನೆಯೂ ಸಾಧ್ಯ

ಆಲಿಬಾಬಾ ಎಐನ ಚಿತ್ರ ರಚನೆ ವಿಧಾನವು ಅದ್ಭುತವಾಗಿದೆ. ಇದು ಮಿಕ್ಕೆಲ್ಲ ಎಐಗಳಂತೆ ಟೆಕ್ಸ್ಟ್‌ನ ಆಧಾರದ ಮೇಲೆ ಚಿತ್ರಗಳನ್ನು ಸೃಷ್ಟಿಸಬಲ್ಲದು. ಉದಾಹರಣೆಗೆ, ನೀವು ಒಂದು ವಿವರಣೆಯನ್ನು ನೀಡಿದರೆ, ಎಐ ಅದನ್ನು ಆಧರಿಸಿ ಅದಕ್ಕೆ ಸಂಬಂಧಿಸಿದ ಚಿತ್ರಗಳನ್ನು ರಚಿಸುತ್ತದೆ. ಕಲಾವಿದರು, ಡಿಜಿಟಲ್ ಮಾರ್ಕೆಟರ್‌ಗಳು ಮತ್ತು ವಿನ್ಯಾಸಕರಿಗೆ ಸಿಕ್ಕ ಹೊಸ ಅಸ್ತ್ರವಾಗಿದೆ.

ವಿಡಿಯೊ ರಚನೆಗೂ ಅವಕಾಶ ಕಲ್ಪಿಸುವ ಆಲಿಬಾಬಾ ಎಐ, ಸಣ್ಣ ವಿಡಿಯೊಗಳನ್ನು ರಚಿಸಿ, ಅವುಗಳನ್ನು ಸಂಪಾದಿಸುವ ಮತ್ತು ಇನ್ನಷ್ಟು ಪರಿಣಾಮಕಾರಿಯಾಗಿ ಸುಧಾರಿಸುವ ಸಾಮರ್ಥ್ಯವನ್ನೂ ಹೊಂದಿದೆ. ಎಡಿಟಿಂಗ್‌ನ ಈ ಸಾಮರ್ಥ್ಯವು ಚಲನಚಿತ್ರಗಳು ಮತ್ತು ಶೈಕ್ಷಣಿಕ ವಿಷಯಗಳ ರಚನೆಯಲ್ಲಿ ಹೆಚ್ಚಿನ ಪ್ರಭಾವ ಬೀರುತ್ತದೆ. ಇದು ಟೆಕ್ಸ್ಟ್‌ನ ಆಧಾರದ ಮೇಲೆ ಅಥವಾ ಇತರ ಡೇಟಾವನ್ನು ಬಳಸಿ ಸಣ್ಣ ವಿಡಿಯೊಗಳನ್ನು ರಚಿಸುತ್ತದೆ. ■